# ಕಲೆಯೊಂದು ನಾಮ ಹಲವು



ಸಾಂಪ್ರದಾಯಿಕ ರಂಗೋಲಿ ಕಲೆ ಆಧುನಿಕ ಬದುಕಿನೊಂದಿಗೂ ತಳುಕು ಹಾಕಿಕೊಂಡಿದೆ. ದೇಶದ ನಾನಾ ಭಾಗಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲಾಗುವ ರಂಗೋಲಿ ಮನೆಯ ಮುಂದಿನ ಭಾಗದ ಅಲಂಕಾರಕ್ಕಾಗಿ ಮಾತ್ರವಲ್ಲದೆ ದುಷ್ಟಶಕ್ತಿಗಳ ನಿಗ್ರಹಕ್ಕೂ ಸಹಕಾರಿ ಎಂಬುದು ಎಲ್ಲರ ನಂಬಿಕೆ.

■ ಸುಮ ವೀಣಾ

ಬಸವ ಪುರಾಣದಲ್ಲಿ ರಂಗವಲ್ಲಿಯನ್ನು ಕುರಿತು 'ವೃಕ್ಷಂ, ಲತೆ, ಸ್ವಸ್ತಿಕಂ. ಪದ್ಮರೇಖೆ, ಗೃಹಲಕ್ಷಣಂ ಮೈತ್ರಿ ಬಂಧಂ ರಂಗಾವಲಿಯಕ್ಕುಂ' ಎಂದು ಹೇಳಿದೆ. ದೇವರು ಮನುಷ್ಯನನ್ನು ಸೃಷ್ಟಿ ಮಾಡಿದಂತೆ ಮನುಷ್ಯ ಕಲೆಯನ್ನು ದೃಷ್ಟಿಸಿದ್ದಾನೆ. ಒಂದು ವೇಳೆ ಮನುಷ್ಯನಿಗೆ ಕಲೆಯ ಆಸಕ್ತಿಯಿರದಿದ್ದರೆ ಬರಡಾಗಿ ಹೋಗಿಬಿಡುತ್ತಿದ್ದನೇನೋ? ಅವನ ಕಲಾನೈಪುಣ್ಯತೆಗೆ ನಿಸರ್ಗದ ದೃಶ್ಯಗಳು ಪ್ರೇರೇಪಣೆ ನೀಡುತ್ತವೆ. ಹೆತ್ತ ಮಗುವನ್ನು ತಾಯಿ ಆಲಿಂಗನ ಮಾಡುವಂತೆ ಮನುಷ್ಯ ತಾನೇ ಸೃಜಿಸಿದ ಕಲೆಯ ಆರಾಧಕನಾಗುತ್ತಾನೆ. ಅಂತಹ ಮನೆಗೆ, ಅಂಗಳಕ್ಕೆ ಶೋಭೆಯನ್ನು ತರುವ ಕಲೆಯೇ ರಂಗೋಲಿ. ಸಂಪ್ರದಾಯ ಮತ್ತು ಗೃಹಾಲಂಕಾರಕ್ಕೂ ಬೇಕಾಗಿರುವ ಈ ರಂಗೋಲಿ ಹೆಣ್ಮಕ್ಕಳ ಕಲ್ಪನಾಶಕ್ತಿ ಹಾಗೂ ಕಲಾನೈಪುಣ್ಯತೆಯ ಸಂಕೇತವಾಗಿದೆ.

64 ಕಲೆಗಳಲ್ಲಿ ಚಿತ್ರಕಲೆ ಪ್ರಧಾನವಾದದ್ದು. ಚಿತ್ರಕಲೆಯು 'ಬಿಂದುಜ' ವಿಭಾಗಕ್ಕೆ ಸೇರಿದೆ. ಇದನ್ನು 'ಧೂಳೀಚಿತ್ರ' ಎಂದೂ ಕರೆಯುತ್ತಾರೆ. ಜಾನಪದದ ಮುಖ್ಯಕಲೆಗಳಲ್ಲಿ ರಂಗೋಲಿಗೆ ಅಗ್ರಸ್ಥಾನ. 'ವಲ್ಲಿ' ಎಂದರೆ 'ಬಳ್ಳಿ' ಎಂಬ ಅರ್ಥವಿದೆ. ಹಾಗಾಗಿ ರಂಗವಲ್ಲಿ ಎಂದರೆ ಬಣ್ಣಗಳಿಂದ ಅಲಂಕರಿಸಿದ ಲತೆಗಳು. ರಂಗಾವಳಿ (ರಂಗವಲ್ಲಿ) ಆಗಿದೆ. ರಂಗ ಎಂದರೆ ಶ್ರೀಕೃಷ್ಣ, ಅಚ್ಯುತ, ಅನಂತ, ಕೇಶವ, ನಾರಾಯಣ, ಶ್ರೀಹರಿ ಶ್ರೀನಿವಾಸ, ಗೋವಿಂದ ಎಂಬ ಅರ್ಥವೂ ಇದೆ. 'ಉಲಿ' ಎಂದರೆ ಆನಂದಿಸು ಎಂದು 'ಒಲಿ' ಎಂದರೆ ಅನುಗ್ರಹಿಸು, ಆಶೀರ್ವಾದ ಮಾಡು ಎಂಬ ಅರ್ಥವೂ ಇದೆ.

'ರಂಗ' ಎಂದರೆ ವೇದಿಕೆ, ವಿಶಾಲವಾದ ಸ್ಥಳ ಎಂಬ ಅರ್ಥವೂ ಇದೆ. ಅರ್ಥಾತ್ ವಿಶಾಲವಾದ ಸ್ಥಳದಲ್ಲಿ ರಂಗು ರಂಗಾದ ಪುಡಿಗಳಿಂದ ಬಿಡಿಸುವ ಚಿತ್ತಾಕರ್ಷಕ ಚಿತ್ರಗಳು ಎಂದು ರಂಗೋಲಿಗಳನ್ನು ಕರೆಯಬಹುದು. ಭಗವಂತನನ್ನು ಆರಾಧಿಸುವ ಕ್ರಮಗಳಲ್ಲಿ ಕಲೆಯೂ ಒಂದು ಹೆಂಗಳೆಯರು ತಮ್ಮ ಮನೋವಾಂಛೆಯನ್ನು ಈಡೇರಿಸಿಕೊಳ್ಳುವ ಸಲುವಾಗಿ ರಂಗೋಲಿಗಳನ್ನು ಬಿಡಿಸುವುದಿದೆ (ಕಲ್ಯಾಣ ಕೋಲಂ, ಕುಬೇರ ಕೋಲಂ ಇತ್ಯಾದಿ). ಮಾನವನ ಇತಿಹಾಸದೊಂದಿಗೆ ರಂಗೋಲಿಯ ಇತಿಹಾಸವೂ ಬೆಸೆದುಕೊಂಡಿದೆ. ಅಂದರೆ ಐದುಸಾವಿರ ವರ್ಷಗಳ ಹಿಂದೇಯೇ ರಂಗೋಲಿಗಳ ಉಲ್ಲೇಖವಿದೆ. ಮಾಂತ್ರಿಕಶಕ್ತಿಯನ್ನು ನಿಯಂತ್ರಿಸಲು ದುಷ್ಟಶಕ್ತಿಗಳ ನಿವಾರಣೆಗೆ, ಅರಿಷ್ಟಗಳ ನಿವಾರಣೆಗೆ ರಂಗೋಲಿ ಸಹಾಯಕಾರಿ ಎಂಬ ನಂಬಿಕೆ ನಮ್ಮ ಜಾನಪದದಲ್ಲಿದೆ.

ಸಿಂಧೂ ನಾಗರಿಕತೆ, ಆರ್ಯ ಸಂಸ್ಕೃತಿಯ ನಾರಿಯರೂ ರಂಗೋಲಿಗಳನ್ನು ಕರಗತ ಮಾಡಿಕೊಂಡಿದ್ದರು, ವಿಶೇಷವಾಗಿ ಅತಿಥಿಗಳನ್ನು ಸಂತುಷ್ಟಗೊಳಿಸಲು ರಂಗೋಲಿಗಳನ್ನು ಹಾಕುತ್ತಿದ್ದರು ಎಂದು ಇತಿಹಾಸ ಹೇಳುತ್ತದೆ. ಇಂತಹ ರಂಗೋಲಿಗಳಲ್ಲಿ ಸಾಂಪ್ರದಾಯಿಕ ಹಾಗೂ ಅಲಂಕಾರಿಕ ಎಂಬ ಎರಡು ಬಗೆಗಳನ್ನು ಕಾಣಬಹುದು.

## ಹೆಸರುಗಳು ನೂರಾರು...

ಭಾರತೀಯರಿಗೆ ರಂಗೋಲಿ ಹೊಸತಲ್ಲ. ಅದು ಬದುಕಿನ ಸಂಸ್ಕೃತಿಯ ಅವಿಭಾಜ್ಯ ಅಂಗ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ರಂಗೋಲಿಗಳನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಗುಜರಾತಿನಲ್ಲಿ 'ಸತಿಯಾ' ಉತ್ತರ ಪ್ರದೇಶದಲ್ಲಿ 'ಸಾಝು' ತಮಿಳುನಾಡು, ಕೇರಳದಲ್ಲಿ ಕೋಲಂ, ಕರ್ನಾಟಕದಲ್ಲಿ ರಂಗೋಲಿ, ಬಂಗಾಳದಲ್ಲಿ ಅಲ್ಪನಾ, ಮಧ್ಯಪ್ರದೇಶದಲ್ಲಿ 'ಎಷನ್, ಒರಿಸ್ಸಾದಲ್ಲಿ 'ಝುಟೆ', ಅಂಧ್ರದಲ್ಲಿ ಮುಗ್ಗು ಎಂದು ಕರೆಯುತ್ತಾರೆ. ತುಳುವಿನಲ್ಲೂ ಹೊಸ್ತಿಲು ಬರೆಯುವುದು ಎಂದು ಕರೆಯುವುದು ವಾಡಿಕೆ. ಹಾಗೆ ಉತ್ತರ ಕನ್ನಡದ ಹಾಲಕ್ಕಿ ಜನಾಂಗದವರು, ದಕ್ಷಿಣ ಕನ್ನಡದ ಗೋಮಕ್ಕಲವರು ರೂಢಿಸಿಕೊಂಡಿರುವ ಈ ಕಲೆಗೆ 'ಶ್ರೇಡಿ' ಕಲೆ ಎಂದು ಕರೆಯುವುದಿದೆ. ಶ್ರೇಡಿ= ಬೇಡಿ ಅರ್ಥಾತ್ ಜೇಡಿ ಮಣ್ಣನ್ನು ಬಳಸಿಕೊಂಡು ಹಾಕುವ ಚಿತ್ರ ಚಿತ್ತಾರಗಳು.

ಹಿಂದೆ ಮಣ್ಣಿನ ನೆಲದ ಮೇಲೊಂದು ಹಸಿರು ಕ್ಯಾನ್‌ವಾಸ್ ಹಾಕಿ ಅರ್ಥಾತ್ ಸೆಗಣಿ ಸಾರಿಸಿ ಅದರ ಮೇಲೆ ರಂಗೋಲಿ ಬಿಡಿಸುವುದು ವಾಡಿಕೆಯಲ್ಲಿತ್ತು. ಏಕೆ ಈ ಭೂತಕಾಲದ ಮಾತು ಎಂದರೆ ನಗರೀಕರಣದ ಈ ಭರಾಟೆಯಲ್ಲಿ ಮಣ್ಣಿನ ನೆಲವೇ ಇಲ್ಲ ಎಲ್ಲ ಕಾಂಕ್ರೀಟ್‌ಮಯವಾಗಿದೆ. ಪುಡಿಯಿಂದ ಹಾಕುವ ರಂಗೋಲಿಗೆ ಬದಲಾಗಿ ಚಾಕ್ ಪೀಸ್‌ಗಳಿಂದ ರಂಗೋಲಿ ಹಾಕಿದ್ದು ಮುಗಿದು ಈಗ ಪ್ಲಾಸ್ಟಿಕ್ ಹಾಳೆಯ ಮೇಲೆ ಮೊದಲೇ